ಮಾರ್ಚ್/ಏಪ್ರಿಲ್ 2025 ರ ಪರೀಕ್ಷೆ-1

MARCH/APRIL 2025 EXAMINATION-1

**A**

**CCE RF/RR/PF/PR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12

[ Total No. of Printed Pages : 12

[ ಒಟ್ಟು ಪ್ರಶ್ನೆಗಳ ಸಂಖ್ಯೆ : 47

[ Total No. of Questions : 47

**ಸಂಕೇತ ಸಂಖ್ಯೆ : 96-K** **Code No. : 96-K**

# ವಿಷಯ : ಅರ್ಥಶಾಸ್ತ್ರ

# Subject : ECONOMICS

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)**

**(Regular Fresh / Regular Repeater / Private Fresh / Private Repeater)**

ದಿನಾಂಕ : 01. 04. 2025 ] [ Date : 01. 04. 2025

ಸಮಯ : ಬೆಳಗ್ಗೆ 10-00 ರಿಂದ ಮಧ್ಯಾಹ್ನ 1-15 ರವರೆಗೆ ] [ Time : 10-00 A.M. to 1-15 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ. ***(ಬಾಣದ ಗುರುತನ್ನು ಅನುಸರಿಸಿ). ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಇವೆರಡೂ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಮಾನವ ಅಭಿವೃದ್ಧಿ ಸೂಚ್ಯಂಕವನ್ನು ರೂಪಿಸಿದವರು

(A) ರ್‍ಯಾಗ್ನರ್ ನರ್ಕ್ಸ್

(B) ಮೆಹಬೂಬ್–ಉಲ್–ಹಕ್

(C) ಆಡಂ ಸ್ಮಿತ್

(D) ಆಲ್ಫ್ರೆಡ್ ಮಾರ್ಷಲ್

2. ಇವುಗಳಲ್ಲಿ ಅತಿ ಕಡಿಮೆ ಜನಸಾಂದ್ರತೆಯನ್ನು ಹೊಂದಿರುವ ರಾಜ್ಯ

(A) ಕರ್ನಾಟಕ

(B) ಉತ್ತರ ಪ್ರದೇಶ

(C) ಅರುಣಾಚಲ ಪ್ರದೇಶ

(D) ತಮಿಳುನಾಡು

3. ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವರು

(A) ಕಾರ್ನ್‌ವಾಲೀಸ್

(B) ಕ್ಯಾನಿಂಗ್

(C) ವೆಲ್ಲೆಸ್ಲಿ

(D) ಕರ್ಜನ್

4. ಕೃಷಿ ಹಣಕಾಸಿನ ಅತ್ಯುನ್ನತ ಬ್ಯಾಂಕು

(A) ಸಹಕಾರಿ ಬ್ಯಾಂಕು

(B) ಪ್ರಾದೇಶಿಕ ಗ್ರಾಮೀಣ ಬ್ಯಾಂಕು

(C) ನಬಾರ್ಡ್ ( NABARD )

(D) ಕೆನರಾ ಬ್ಯಾಂಕು

5. “ಕೈಗಾರಿಕೀಕರಣ ಇಲ್ಲವೇ ವಿನಾಶ” ಈ ಹೇಳಿಕೆ ನೀಡಿದವರು

(A) ಜವಾಹರಲಾಲ್ ನೆಹರೂ

(B) ಮಹಾತ್ಮಾ ಗಾಂಧೀಜಿ

(C) ಎಂ.ಎಸ್. ಸ್ವಾಮಿನಾಥನ್

(D) ಸರ್ ಎಂ. ವಿಶ್ವೇಶ್ವರಯ್ಯ

6. ಜೀತ ಪದ್ಧತಿ ನಿರ್ಮೂಲನ ಕಾಯ್ದೆ ಜಾರಿಗೆ ಬಂದಿದ್ದು

(A) 2015

(B) 2000

(C) 1976

(D) 1956

7. ಅತ್ಯಂತ ವೇಗದ ಸಾರಿಗೆ ಮಾಧ್ಯಮ

(A) ವಾಯು ಸಾರಿಗೆ

(B) ರಸ್ತೆ ಸಾರಿಗೆ

(C) ಜಲ ಸಾರಿಗೆ

(D) ರೈಲು ಸಾರಿಗೆ

8. ಪ್ರಪಂಚದ ಪ್ರಾಚೀನ ಕೇಂದ್ರ ಬ್ಯಾಂಕು

(A) ಇಂಪೀರಿಯಲ್ ಬ್ಯಾಂಕ್

(B) ರಿಕ್ಸ್ ಬ್ಯಾಂಕ್

(C) ಬ್ಯಾಂಕ್ ಆಫ್ ಫ್ರಾನ್ಸ್

(D) ಬ್ಯಾಂಕ್ ಆಫ್ ಇಂಗ್ಲೆಂಡ್

9. ಇಂಗ್ಲೆಂಡಿನ ಕರೆನ್ಸಿ

(A) ಪೌಂಡ್

(B) ಡಾಲರ್

(C) ಫ್ರಾಂಕ್

(D) ರೂಪಾಯಿ

10. 'ಪ್ರಗತಿಯ ಯಂತ್ರ' ಎಂದು ಪರಿಗಣಿಸಲ್ಪಟ್ಟಿರುವ ಅಂಶ

(A) ಪ್ರದರ್ಶನ ಮಾರಾಟ

(B) ಸಂತೆಗಳು

(C) ಆಂತರಿಕ ವ್ಯಾಪಾರ

(D) ಅಂತಾರಾಷ್ಟ್ರೀಯ ವ್ಯಾಪಾರ

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) ಅಣುಶಕ್ತಿ | (i) ಬಾಕ್ಸೈಟ್ |
| (B) ಅಲ್ಯುಮಿನಿಯಂ | (ii) ಪೆಟ್ರೋಲಿಯಂ |
| (C) ಚಿನ್ನ | (iii) ಕಲ್ಲಿದ್ದಲು |
| (D) ದ್ರವರೂಪದ ಚಿನ್ನ | (iv) ಯುರೇನಿಯಂ |
| (E) ಬಿಟುಮಿನಸ್ | (v) ಮ್ಯಾಗ್ನಾಟೈಟ್ |
| | (vi) ಹಟ್ಟಿ |
| | (vii) ಸುಣ್ಣದ ಕಲ್ಲು |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಬಡತನದ ವಿಷವರ್ತುಲವನ್ನು ವಿವರಿಸಿದವರು ಯಾರು ?

13. ಕುಟುಂಬ ಯೋಜನೆ ಎಂದರೇನು ?

14. ಭಾರತದಲ್ಲಿನ ಮರಣ ದರ ಇಳಿಕೆಗೆ ಕಾರಣವೇನು ?

15. ತುಂತುರು ನೀರಾವರಿ ಎಂದರೇನು ?

16. ಪ್ರೊ. ನಾರ್ಮನ್ ಬೋರ್ಲಾಗ್‌ರವರನ್ನು 'ಹಸಿರು ಕ್ರಾಂತಿಯ ಪಿತಾಮಹ' ಎಂದು ಏಕೆ ಕರೆಯಲಾಗಿದೆ ?

17. ಇಂಪೀರಿಯಲ್ ಬ್ಯಾಂಕನ್ನು ರಾಷ್ಟ್ರೀಕರಿಸಲಾಯಿತು. ಏಕೆ ?

18. ಕೈಗಾರಿಕೀಕರಣ ಎಂದರೇನು ?

19. ಕಾರ್ಮಿಕ ನೀತಿಯನ್ನು ರೂಪಿಸಲು ಕಾರಣವೇನು ?

20. ಬ್ರಾಡ್‌ಗೇಜ್ ಎಂದರೇನು ?

21. ಭಾರತೀಯ ರಿಸರ್ವ್ ಬ್ಯಾಂಕಿನ ಕೇಂದ್ರ ಕಛೇರಿ ಎಲ್ಲಿದೆ ?

22. ಬಂದರು ಅಭಿವೃದ್ಧಿ ಇಲಾಖೆಯ ಸ್ಥಾಪನೆಯ ಉದ್ದೇಶವೇನು ?

23. ರಿಸರ್ವ್ ಬ್ಯಾಂಕ್ ಸ್ಥಾಪನೆಯ ಕಾರಣವನ್ನು ತಿಳಿಸಿ.

24. ವಿನಿಮಯ ದರವನ್ನು ವ್ಯಾಖ್ಯಾನಿಸಿ.

25. ವಿದೇಶಿ ವಿನಿಮಯ ಸಂಗ್ರಹಣೆಯ ಮಹತ್ವವೇನು ?

26. ವ್ಯಾಪಾರ ಎಂದರೇನು ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**14 × 2 = 28**

27. ಅನಭಿವೃದ್ಧಿ ಆರ್ಥಿಕತೆಯಾಗಿ ಭಾರತದ ಲಕ್ಷಣಗಳಾವುವು ?

28. ನೈಸರ್ಗಿಕ ಸಂಪನ್ಮೂಲಗಳನ್ನು ಹೇಗೆ ವರ್ಗೀಕರಿಸಬಹುದು ?

29. ಜನಸಂಖ್ಯಾ ಸ್ಫೋಟದ ಪರಿಣಾಮಗಳನ್ನು ವಿವರಿಸಿ.

30. ಭಾರತದಲ್ಲಿ ನೀರಾವರಿಯ ಪ್ರಮುಖ ಮೂಲಗಳನ್ನು ವಿವರಿಸಿ.

31. ಕೃಷಿ ಹಣಕಾಸಿನ ಪ್ರಕಾರಗಳು ಯಾವುವು ?

32. ರಾಷ್ಟ್ರೀಯ ಕೈಗಾರಿಕೆಗಳ ನಿಗಮದ ಕಾರ್ಯಗಳಾವುವು ?

33. ಭಾರತದಲ್ಲಿ ಕಾರ್ಮಿಕ ನೀತಿಯ ಉದ್ದೇಶಗಳನ್ನು ತಿಳಿಸಿ.

34. ಬಡತನದ ವಿಧಗಳನ್ನು ಪಟ್ಟಿ ಮಾಡಿ.

35. ಬಡತನಕ್ಕೆ ಪ್ರಮುಖ ಕಾರಣಗಳಾವುವು ?

36. ರೈಲು ಸಾರಿಗೆಯ ಮಹತ್ವವೇನು ?

37. ರಸ್ತೆ ಸಾರಿಗೆಯ ವರ್ಗೀಕರಣವನ್ನು ತಿಳಿಸಿ.

38. ಭಾರತೀಯ ರಿಸರ್ವ್ ಬ್ಯಾಂಕನ್ನು "ಬ್ಯಾಂಕುಗಳ ಬ್ಯಾಂಕು" ಎಂದು ಏಕೆ ಕರೆಯಲಾಗಿದೆ ?

39. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ಕಛೇರಿಗಳು ಎಲ್ಲಿ ಸ್ಥಾಪಿಸಲ್ಪಟ್ಟಿವೆ ?

40. ಭಾರತದ ಪ್ರಮುಖ ಆಮದುಗಳನ್ನು ಪಟ್ಟಿ ಮಾಡಿ.

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

41. ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಲಕ್ಷಣಗಳು ಯಾವುವು ?

42. ಭಾರತದಲ್ಲಿ ಜನಸಾಂದ್ರತೆಯನ್ನು ಪ್ರಭಾವಿಸುವ ಅಂಶಗಳನ್ನು ತಿಳಿಸಿ.

43. ಭಾರತದಲ್ಲಿ ಭೂ ಸುಧಾರಣೆಗಳು ವಿಫಲಗೊಂಡಿವೆ, ಏಕೆ ?

44. ಕೃಷಿಯ ಸಾಂಸ್ಥಿಕೇತರ ಹಣಕಾಸಿನ ಮೂಲಗಳನ್ನು ವಿವರಿಸಿ.

45. ಕಾರ್ಮಿಕ ಸಂಘಗಳ ಪ್ರಾಮುಖ್ಯತೆಯೇನು ?

46. ಭಾರತದ ಬಡತನ ನಿರ್ಮೂಲನೆಗೆ ಪರಿಹಾರಗಳನ್ನು ಪಟ್ಟಿ ಮಾಡಿ.

**VI. ಈ ಪ್ರಶ್ನೆಗೆ ನಾಲ್ಕರಿಂದ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $1 \times 4 = 4$**

47. ಭಾರತದಲ್ಲಿ ಕೈಗಾರಿಕೆಗಳ ಮಹತ್ವವೇನು ?

DO NOT WRITE ANYTHING HERE